- - ಅಸಲು ದಾವೆ ಸಂ: **05/2022.** ಪಿ .ಡಬ್ಲು **-1**

**ದಿ: 04-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಶ್ರೀ ವಿ ಎಮ್ ಎಮ್ ವಕೀಲರಿಂದ:**

2. ದಾವಾ ಆಸ್ತಿಯನ್ನು ನನ್ನ ತಂದೆಯವರು ನನ್ನ ಹೆಸರಿನಲ್ಲಿ 1964 ರಲ್ಲಿ ನಗರಗುಂಡ ಬಾಲಯ್ಯ ತಂದೆ ರಂಗಯ್ಯ ಇವರ ಕಡೆಯಿಂದ ಖರೀದಿ ಮಾಡಿರುತ್ತಾರೆ. ಖರೀದಿ ಮಾಡುವ ಕಾಲಕ್ಕೆ ನನಗೆ 12 ವರ್ಷ ವಯಸ್ಸಾಗಿತ್ತು. ಬಾಲಯ್ಯ ತಂದೆ ರಂಗಯ್ಯ ಇವರು ನನ್ನ ತಂದೆಯ ಮೇಲೆ ದಾವೆಯನ್ನು ಖರೀದಿ ಮಾಡಿದ ಮೇಲೆ ಮಾಡಿದ್ದರು. ದಾವೆ ಮಾಡಿದಾಗ ನನಗೆ ವಯಸ್ಸು 12 ವರ್ಷ

ವಯಸ್ಸಾಗಿತ್ತು. ನಿಮ್ಮ ವಾದ ಪತ್ರದಲ್ಲಿ ದಾವಾ ಹೊಲ ಖರೀದಿ ಮಆಡುವ ಕಾಲಕ್ಕೆ ನಿಮಗೆ 12 ವರ್ಷ ವಯಸ್ಸಾಗಿತ್ತು ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ವಿಷಯವನ್ನು ನಿಮ್ಮ ದಾವಾ ವಾದ ಪತ್ರದಲ್ಲಾಗಲೀ ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಾಗಲಿ ಹೇಳಿ ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ವಿಷಯ ನಿಮಗೆ ಗೊತ್ತಿದ್ದರೂ ಈಗ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

2. ದಾವಾ ಹೊಲ ಖರೀದಿ ಮಅಡುವ ಕಾಲಕ್ಕೆ ನನ್ನ ತಂದೆ ಯವರು ಒಟ್ಟು 03 ಸರ್ವೆನಂಬರ್‌ಗಳ ಜಮೀನುಗಳನ್ನು ಖರೀದಿ ಮಾಡಿರುತ್ತಾರೆ. ಆ ಸರ್ವೆ ನಂಬರ್ ಗಳೆಂದರೆ ಸ ನಂ 126, 190 ಇನ್ನೊಂದು ಸರ್ವೆ ನಂಬರ್ ನನಗೆ ನೆನಪಿಲ್ಲ. ಈ ದಾವೆಯನ್ನು 03 ಹೊಲದ ಮೇಲೆ ಸಲ್ಲಿಸಿದ್ದೇನೆ. ಖರೀದಿ ಮತ್ತು ಕೋರ್ಟ್ ಆದೇಶ ಆದ ಮೇಲೆ ನನ್ನ ಹೆಸರಿಗೆ 03 ಸರ್ವೆ ನಂಬರ್ ಮುಟೇಶನ್ ಆಗಿರುತ್ತವೆ. ಆದರೆ ಯಾವ ವರ್ಷ ಎಂದು ನನಗೆ ನೆನಪಿಲ್ಲ. ಮುಟೇಶನ್ ಕಾಪಿಯನ್ನು ಹಾಜರು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನಿ ಪಿ 5 ವರ್ಗಾಮುಬಾದಿಲಾ ರಜಿಸ್ಟರ್ ಪ್ರಕಾರ ದಾವಾ ಆಸ್ತಿ ನಿಮ್ಮ ಹೆಸರಿಗೆ ಮುಟೇಶನ್ ಆಗಿಲ್ಲ ಎಂದರೆ ಸರಿಯಲ್ಲ. ನಿ ಪಿ 5 ರ ಮುಟೇಶನ್ ಪ್ರಕಾರ ನಿಮ್ಮ ಹೆಸರಿಗೆ ದಾವಾ ಆಸ್ತಿ ಯಾವ ಆಧಾರದ ಮೇರೆಗೂ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಮ್ಮ ಹೆಸರಿಗೆ ಮುಟೇಶನ್ ಆಗದೇ ಇದ್ದರೂ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3. ದಾವಾ ಆಸ್ತಿಗಳ ಪಹಣಿಗಳನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸೊನ್ನೆಸಾಬ ತಂದೆ ನಬಿಸಾಬ ಇವರು ಪ್ರತಿವಾದಿ ನಂಬರ್ 1 ರಿಂದ 3 ರವರ

ತಂದೆಯಾಗಿರುತ್ತಾರೆ. ನಿ ಪಿ 6 ದಾಖಲೆಯ ಪ್ರಕಾರ ದಾವಾ ಆಸ್ತಿ ಸ ನಂ 126/1, ವಿಸ್ತೀರ್ಣ 02 ಎಕರೆ 18 ಗುಂಟೆ ಪ್ರತಿವಾದಿ ನಂಬರ್ 1 ರಿಂದ 3 ಇವರ ತಂದೆ ಕಬ್ಜಾದಾರರು ಎಂದು ಬರೆದಿದ್ದಾರೆ ಎಂದರೆ ಸಾಕ್ಷಿದಾರರು ತಪ್ಪಾಗಿ ಬರೆದಿದ್ದಾರೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಇವತ್ತಿಗೂ ನಾವೇ ಸಾಗುವಳಿ ಮಾಡುತ್ತಿದ್ದೇವೆ ಎನ್ನುತ್ತಾರೆ. ನೀವು ಸಾಗುವಳಿ ಮಾಡುತ್ತಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 1963-64 ರಿಂದ 1982-83 ರವರೆಗಿ ದಾವಾ ಆಸ್ತಿಗಳ ಪಹಣಿಗಳನ್ನು ನೀವು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ನೀವು ಪಹಣಿ ಪತ್ರಿಕೆಗಳನ್ನು ಹಾಜರು ಮಾಡಿಲ್ಲ ಎಂದರೆ ಹಾಜರು ಮಾಡಿದ್ದೇನೆ ಎನ್ನುತ್ತಾರೆ. ಮುಟೇಶನ್ ನಂಬರ್ 39/1981 ರ ಪ್ರಕಾರ ನಿಮ್ಮ ಹೆಸರಿಗೆ 01 ಎಕರೆ 09 ಗುಂಟೆ ಮಾತ್ರ ಮುಟೇಶನ್ ಆಗಿದೆ ಎಂದರೆ ಸರಿಯಲ್ಲ. ದಾವಾ ಹೊಲ ಖರೀದಿಯಾದ ಮೇಲೆ ಮತ್ತು ಕೋರ್ಟ್ ಡಿಕ್ರಿಯಾದ ಮೇಲೆ ನಾವು ಅಳತೆ ಮಾಡಿಸಿರುವುದಿಲ್ಲ.

4. ದಾವಾ ಆಸ್ತಿ ಸ ನಂ 126/1, ವಿಸ್ತೀರ್ಣ 02 ಎಕರೆ 18 ಗುಂಟೆ ಮೊದಲು ರಂಗಯ್ಯ ತಂದೆ ಬಾಲಯ್ಯ ಇವರ ಹೆಸರಿನಲ್ಲಿತ್ತು ಎಂದರೆ ಸರಿ. 1963-64, ಮತ್ತು 1964-65 ರ ಪಹಣಿ ಕಾಲಂ ನಂಬರ್ 9 ರಲ್ಲಿ ಸೊನ್ನೆಸಾಬ ರವರ ಹೆಸರು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ತಪ್ಪಾಗಿ ನಮೂದು ಮಾಡಿದ್ದಾರೆ ಎನ್ನುತ್ತಾರೆ. 1965-66 ರಿಂದ 1967-68 ರ ಪಹಣಿ ಕಾಲಂ ನಂಬರ್ 9 ಮತ್ತು 12 ರಲ್ಲಿ ಸೊನ್ನೆಸಾಬ ಮತ್ತು ನಿಮ್ಮ ಹೆಸರು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಏನೂ ಗೊತ್ತಿಲ್ಲ ಎನ್ನುತ್ತಾರೆ. ಈ ವಿಷಯ ನಿಮಗೆ ಗೊತ್ತಿದ್ದರೂ ಈಗ ಏನೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 1968-69 ರಿಂದ 1982-83 ರ ಪಹಣಿ ಕಾಲಂ ನಂಬರ್ 9 ರಲ್ಲಿ ನಿಮ್ಮ ಹೆಸರು 01 ಎಕರೆ 09 ಗುಂಟೆ ಕಬ್ಜಾದಾರರು ಎಂದು ಬರೆದಿದ್ದಾರೆ ಎಂದರೆ

ನನಗೆ ಗೊತ್ತಿಲ್ಲ. ಈ ವಿಷಯ ನಿಮಗೆ ಗೊತ್ತಿದ್ದರೂ ಈಗ ಏನೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 1965-66 ರಿಂದ 1982-83 ರವರೆಗೆ ದಾವಾ ಆಸ್ತಿಯಲ್ಲಿ 01 ಎಕರೆ 09 ಗುಂಟೆ ಜಮೀನಿನಲ್ಲಿ ಮಾತ್ರ ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿದ್ದು ಅಷ್ಟೇ ಕ್ಷೇತ್ರಕ್ಕೆ ನೀವು ಕಬ್ಜಾದಾರರಾಗಿದ್ದೀರಿ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ನಲ್ಲಿ ಉಳಿದ 01 ಎಕರೆ 09 ಗುಂಟೆ ಜಮೀನಿಗೆ ನೀವು ಹಕ್ಕುದಾರರು ಮತ್ತು ಮಾಲೀಕರು ಹಾಗೂ ಕಬ್ಜಾದಾರರು ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸೇರಿದ 01 ಎಕರೆ 09 ಗುಂಟೆ ಜಮೀನು ಕಬಳಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಉದ್ದೇಶ ಪೂರ್ವಕವಾಗಿ ದಾವಾ ಆಸ್ತಿಗೆ ಸಂಬಂಧಿಸಿದ 1963-64 ರಿಂದ 1982-83 ರವರೆಗಿನ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

5. ದಾವಾ ಆಸ್ತಿಯನ್ನು ನಿಮ್ಮ ಹೆಂಡತಿಯ ಹೆಸರಿನಲ್ಲಿ ಯಾವ ವರ್ಷದಲ್ಲಿ ಮಾಡಿಸಿದ್ದಿರಿ ಎಂದರೆ ನನಗೆ ಗೊತ್ತಿಲ್ಲ. ಆಸ್ತಿ ವರ್ಗಾವಣೆ ಮಾಡುವ ಪೂರ್ವದಲ್ಲಿ ಸರ್ವೆ ಮತ್ತು ಅಳತೆಯನ್ನು ಮಾಡಿಸಿರುವುದಿಲ್ಲ. ಯಾವ ಉದ್ದೇಶಕ್ಕಾಗಿ ನಿಮ್ಮ ಹೆಂಡತಿ ಹೆಸರಿಗೆ ಮುಟೇಶನ್ ಮಾಡಿಸಿದ್ದೀರಿ ಎಂದರೆ ಅವರ ಹೆಸರಲೇ ಜಮೀನು ಇರಬೇಕು ಎಂದು ಹೇಳಿದ್ದರಿಂದ ಮಾಡಿಸಿದ್ದೇನೆ ಎನ್ನುತ್ತಾರೆ. 1983-84 ರ ಪಹಣಿಯಲ್ಲಿ ಹಿಂದೆ ನಿಮ್ಮ ಹೆಸರಿಗೆ ಇದ್ದ 01 ಎಕರೆ 09 ಗುಂಟೆ ಜಮೀನನ್ನು ಬದಲಿಸಿ 02 ಎಕರೆ 18 ಗುಂಟೆ ಜಮೀನು ಎಂದು ಹೆಚ್ಚಿನ ವಿಸ್ತೀರ್ಣ ಬರೆಸಿ ನಮೂದು ಮಾಡಿದ್ದೀರಿ ಎಂದರೆ ನನಗೆ ಗೊತ್ತಿಲ್ಲ. ನಿ ಪಿ 7 ವರ್ಗಾವಣೆಯಾಗಿರುವ ಮುಟೇಶನ್ ಹಾಜರುಪಡಿಸಿದ ಬಗ್ಗೆ ವಕೀಲರಿಗೆ ಗೊತ್ತಿರುತ್ತದೆ ನನಗೆ ಗೊತ್ತಿಲ್ಲ. ಮುಟೇಶನ್ ನಂಬರ್ 39/15-11-1982 ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಹೆಸರಿಗೆ 02 ಎಕರೆ 18 ಗುಂಟೆ ಜಮೀನು ಇದ್ದ

ಬಗ್ಗೆ ದಾಖಲೆಗಳು ಇರುವುದಿಲ್ಲ ನೀವು ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಹೆಸರಿಗೆ ಮುಟೇಶನ್ ಆಗಿಲ್ಲ ಎಂದರೆ ಸರಿಯಲ್ಲ. ಕಾನೂನಿನ ಪ್ರಕಾರ 02 ಎಕರೆ 18 ಗುಂಟೆ ವಿಸ್ತೀರ್ಣದ ಜಮೀನು ನಿಮ್ಮ ಹೆಸರಿಗೆ ವರ್ಗಾವಣೆ ಆಗಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ದಾಖಲೆ ಸೃಷ್ಟಿಸಿಕೊಂಡು ನಿಮ್ಮ ಹೆಸರಿಗೆ ಪಹಣಿಯಲ್ಲಿ ಹೆಚ್ಚಿನ ವಿಸ್ತೀರ್ಣ ನಮೂದು ಮಾಡಿದ್ದಿರಿ ಎಂದರೆ ಸರಿಯಲ್ಲ. ನೀವು 02 ಎರಕೆ 18 ಗುಂಟೆ ಎಂದು ಹೆಚ್ಚಿನ ವಿಸ್ತೀರ್ಣ ಪಹಣಿಯನ್ನು ಮಾಡಿಸಿಕೊಮಡಿದ್ದಿರಾ ನೀವು 01 ಎಕರೆ 09 ಗುಂಟೆ ಜಮೀನಿನಲ್ಲಿ ಕಬ್ಜಾದಲ್ಲಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಹೆಂಡತಿಯ ಹೆಸರಿನಲ್ಲಿ ವರ್ಗಾವಣೆಯಾಗಿರುವ ಮುಟೇಶನ್ ಹಾಜರುಪಡಿಸಿದ್ದಿರಾ ಎಂದರೆ ನನಗೆ ಗೊತ್ತಿಲ್ಲ. ಮುಟೇಶನ್ ನಂಬರ್ 11/05-07-1989 ನಿ ಪಿ 7 ಮತ್ತು 8 ಸೃಷ್ಟಿ ಮಾಡಿದ ದಾಖಲಾತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ಖೊಟ್ಟಿ ದಾಖೆಲಗಳನ್ನು ಕಂದಾಯ ಅಧಿಕಾರಿಗಳನ್ನು ಸೇರಿಸಿಕೊಂಡು ಪ್ರತಿವಾದಿಯರ ಆಸ್ತಿಗಳನ್ನು ಕಬಳಿಸಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

6. ಸರ್ವೆಗಾಗಿ ಯಾವತ್ತು ಅರ್ಜಿ ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ದಿನಾಂಕ: 20-06-2020 ರ ನಿ ಪಿ 13 ಮತ್ತು 14 ದಾಖಲೆಯ ಪ್ರಕಾರ ಸರ್ವೆ ವರದಿ ಪ್ರಕಾರ ದಾವಾ ಆಸ್ತಿಯ ಬರೆ 36 ಗುಂಟೆ ಕಬ್ಜಾದಲ್ಲಿದ್ದೀರಿ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿ ಪಿ 15 ಎ ಡಿ ಎಲ್ ಆರ್ ಆದೇಶದ ವಿರುದ್ದ ನಿಮ್ಮ ಹೆಂಡತಿ ಸಲ್ಲಿಸಿದ ಅರ್ಜಿ ಪ್ರಕಾರ ನಮೀವು 36 ಗುಂಟೆ ಕಬ್ಜಾದಲ್ಲಿದ್ದೀರಿ ಎಂದು ನಮುದು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ

ಆದೇಶದ ವಿರುದ್ದ ಮೇಲ್ಮನವಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಿಮ್ಮ ಮೇಲ್ಮನವಿಯನ್ನು ಡಿ ಡಿ ಎಲ್ ಆರ್ ತಿರಸ್ಕರಿಸಿದ್ದಾರೆಂದರೆ ನನಗೆ ಗೊತ್ತಿಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಮದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ